VI. ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆಯಿಂದ ಸ್ಪೆಂಟ್‌ವಾಷ್ ರಸ್ತೆಯಲ್ಲಿ ಬಿದ್ದು ರೈತರಿಗೆ ತೊಂದರೆಯಾಗಿರುವುದು.

ಶ್ರೀ ಮಲ್ಲಾರಿಗೌಡ ಎನ್. ಪಾಟೀಲ್.—ಸಂಕೇಶ್ವರದ ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ರೈತ ಜನರಿಗೆ ಕೊಡುತ್ತಿರುವ ಡಿಸ್ಟಲರಿ ಸ್ಪೆಂಟ್‌ವಾಷ್ ಸಾಗಾಣಿಯಿಂದ ರಾಷ್ಟ್ರೀಯ ಹೆದ್ದಾರಿ ನಂ. ೪ ಹಾಗೂ ಇನ್ನುಳಿದ ಡಾಂಬರಿ ರಸ್ತೆ ಮೇಲೆ ಸ್ಪೆಂಟ್‌ವಾಷ್ ಬಿದ್ದು ವಾಹನಗಳ ಅಪಘಾತಕ್ಕೆ ಇದೊಂದು ಪ್ರಮುಖ ಕಾರಣವಾಗಿರುತ್ತದೆ.

ಸ್ಪೆಂಟ್‌ವಾಷನ್ನು ಪ್ರತಿಯೊಂದು ಹೊಲಕ್ಕೆ ಹಾಕುವುದರಿಂದ ಪರಿಸರ ಮಾಲಿನ್ಯ ಹಾಗೂ ಜನಸಾಮಾನ್ಯರಿಗೆ ಇದರಿಂದ ಮುಂದಾಗಬಹುದಾದ ಅನಾಹುತವನ್ನು ವಿಚಾರಣೆ ಮಾಡಿ ಇದನ್ನು ಸಾಗಾಣಿಕೆ ಮಾಡುವುದನ್ನು ತಡೆಹಿಡಿಯುವುದಕ್ಕಾಗಿ ಸರಕಾರದಿಂದ ಯೋಗ್ಯ ಕ್ರಮ ಕೈಗೊಳ್ಳುವುದು ಅತ್ಯವಶ್ಯವಿರುತ್ತದೆ. ರಸ್ತೆಯ ಮೇಲೆ ಈ ಸ್ಪೆಂಟ್‌ವಾಷ್ ಸಾಗಾಣಿಕೆಯಿಂದ ಬೀಳುತ್ತಿರುವ ಸ್ಪೆಂಟ್ ವಾಷನಿಂದ ಎಲ್ಲಾ ವಾಹನಗಳಿಗೆ ತೊಂದರೆಯಾಗಿ ವಾಹನಗಳು ಹಾಗೂ ಜನರಿಗೆ ಆಗುತ್ತಿರುವ ಅಪಾಯವನ್ನು ತಡೆಹಿಡಿಯಲು ಸರಕಾರದಿಂದ ಆದೇಶವನ್ನು ನೀಡಿ ಆಗಬಹುದಾದ ಅನಾಹುತಗಳನ್ನು ತಡೆಹಿಡಿಯುವಂತೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್.—ಸಹಕಾರಿ ಸಚಿವರು ಇಲ್ಲಿ ಇಲ್ಲ. ಅವರಿಗೆ ತಿಳಿಸಿ ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್‌ರವರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

VII. ಪಕ್ಷದ ಮತಿಯಿಂದ ಗ್ರಾಮ ಸಭೆಯನ್ನು ವಿಸರ್ಜಿಸಿರುವುದು

ಶ್ರೀ ಆರ್ ರಾಮಯ್ಯ.—ಗ್ರಾಮ ಸಭೆಯನ್ನು ವ್ಯವಸ್ಥೆ ಮಾಡುವುದರಲ್ಲಿ ಪಕ್ಷದ ಮತಿಯಿಂದ ವಿಸರ್ಜಿಸಬಹುದೆ ? ಅಂತಹ ಸಭೆಯಲ್ಲಿ ಅಧಿಕಾರಿಗಳು ಪಾಲ್ಗೊಳ್ಳಬಹುದೆ ? ಹಿರಿಯೂರು ತಾಲ್ಲೂಕಿನ ರಂಗೇನಹಳ್ಳಿ ಮತ್ತು ಬಿದರಕೆರೆ ಗ್ರಾಮಗಳಲ್ಲಿ ಗ್ರಾಮ ಸಭೆಯನ್ನು ಯುವ ಜನತಾಪಕ್ಷ ೧೫-೧-೧೯೮೬ ರಂದು ವಿಸರ್ಜಿಸಿ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ಬರಮಾಡಿಕೊಂಡಿರುವುದು, ಅಧಿಕಾರಿಗಳು ಜನತಾ ಪಕ್ಷದ ಬೆಂಬಲಿಗರನ್ನಾಗಿಸಿದಂತಾಗಿದೆ. ಇದರಿಂದ ತಾಲ್ಲೂಕಿನ ಜನತೆಯಲ್ಲಿ ಈ ಪಕ್ಷದ ಮುಖಂಡರನ್ನು ತಮ್ಮಗಳ ಕೆಲಸಕ್ಕೆಕಛೇರಿಗೆ ಕರೆದುಕೊಂಡು ಹೋಗಬೇಕಾಗಿ ಬಂದೊದಗಿರುವ ಪ್ರಸಂಗಕ್ಕೆ ವ್ಯಥೆಪಟ್ಟಿರುತ್ತಾರೆ. ಗ್ರಾಮ ಸಭೆ ಪಕ್ಷರಹಿತವಾದ ಹಾಗೂ ಎಲ್ಲರ ಸಮಸ್ಯೆಗಳನ್ನು ಆಲಿಸಿ ಪರಿಹಾರವನ್ನು ಕಂಡುಕೊಳ್ಳುವ ವ್ಯವಸ್ಥೆಗೆ ಇರುವುದು. ಇದರ ಮೂಲ ಉದ್ದೇಶಕ್ಕೆ ಚಿತ್ರದುರ್ಗ ಜಿಲ್ಲಾ ಮಂತ್ರಿಗಳು ಕೊಡಲಿಪಟ್ಟನ್ನು ಹಾಕಿದ್ದಾರೆ. ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂದು ಬಯಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಸದಸ್ಯರಾದ ಶ್ರೀಮಾನ್ ಆರ್. ರಾಮಯ್ಯನವರು ಎತ್ತಿರುವಂತಹ ಪ್ರಶ್ನೆಗೆ ಉತ್ತರವನ್ನು ಆದಷ್ಟು ಬೇಗ ತರಿಸಿಕೊಡುತ್ತೇನೆ.

ಶ್ರೀ ಚಂದ್ರಶೇಖರ್ ರೆಡ್ಡಿ.--ಆಬ್ಸೆಂಟ್.

ಶ್ರೀ ಕೆ. ಬಿ, ಶಾಣಪ್ಪ.—ನನ್ನ ಹತ್ತಿರ ಆ ನೋಟೀಸ್‌ನ ಪ್ರತಿ ಇಲ್ಲ.

ಅಧ್ಯಕ್ಷರು.—ನಿಮ್ಮ ಪರವಾಗಿ ನಾನೇ ಅದನ್ನು ಓದುತ್ತೇನೆ.

VIII. ಸೇಡಂ ತಾಲ್ಲೂಕಿನಲ್ಲಿ ಅಂಗನವಾಡಿ ಉಪಾಧ್ಯಾಯರನ್ನು ನೇಮಿಸುವುದು

ಸೇಡಂ ತಾಲ್ಲೂಕಿನಲ್ಲಿ ಅನೇಕ ಕಡೆಗಳಲ್ಲಿ ಅಂಗನವಾಡಿ ಶಿಕ್ಷಕ ಶಿಕ್ಷಕಿಯರನ್ನು ನೇಮಕ ಮಾಡಿಕೊಳ್ಳಲಾಗಿದೆ. ಇನ್ನು ೧೪-೧೫ ಹಳ್ಳಿಗಳಲ್ಲಿ ಈ ಪುಣ್ಯೆಗಳಿಗೆ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಬೇಕಾಗಿತ್ತು. ಆದರೆ, ನಮ್ಮಗೆ ಸುದ್ದಿಯ ಪ್ರಕಾರ, ಅಂಗನವಾಡಿಯ ಅಧಿಕಾರಿಗಳೇ ಇವುಗಳನ್ನು ಭರ್ತಿ ಮಾಡಿಕೊಂಡಿದ್ದಾರೆ. ಈ ಬಗ್ಗೆ A. C. ಯವರಿಗೂ ಹೇಳಿಲ್ಲ. ಆದ್ದರಿಂದ ತಪ್ಪಿತಸ್ಥ ಅಧಿಕಾರಿಗಳಮೇಲೆ ತಾವು ಕ್ರಮಕೈಗೊಳ್ಳುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ೧೨೯ ಅಂಗನವಾಡಿ ಕೇಂದ್ರಗಳನ್ನು ೧೯೮೫-೮೬ನೇ ಸಾಲಿನಲ್ಲಿ ತೆರದಿದ್ದೇವೆ. ಅವುಗಳಿಗೆ ೧೧೮ ಹುದ್ದೆಗಳಿಗೆ ಕೆಲಸಗಾರರನ್ನು ನೇಮಕಾತಿ ಮಾಡಿದ್ದಾರೆ. ಅವರಲ್ಲಿ ಕೆಲವರು ತರಬೇತಿಗೂ ಕೂಡ ಹೋಗಿದ್ದಾರೆ. ಮತ್ತು ಆ ರೀತಿಯ ನೇಮಕಾತಿಯನ್ನು ಮಾಡಿಕೊಳ್ಳುವುದಕ್ಕಾಗಿ ಬೋರ್ಡ್‌ಂದು ಇದೆ. ಇಂಟರ್‌ವ್ಯೂ ಕಮಿಟಿ ಎಂದು ಇದೆ. ಅದರೆ ಅಸಿಸ್ಟೆಂಟ್ ಕಮೀಷನರ್-ಛೇರ್ಮನ್ನರು ಇರಾಪಿಯು, ಸಹಾಯಕ ನಿರ್ದೇಶಕರು ಒಬ್ಬರು ಸದಸ್ಯರು ಚೈಲ್ಡ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಆಫೀಸರ್ ಕೂಡ ಒಬ್ಬರು ಸದಸ್ಯರು, ನಂತರ ಬಿ.ಡಿ.ಓ. ಕೂಡ ಒಬ್ಬ ಸದಸ್ಯರಾಗಿರುತ್ತಾರೆ ಇವರು ಕೂಡಿ ಮಾಡಿರತಕ್ಕಂತಹ ನೇಮಕಾತಿ ಆದು. ಈ ತರಹ ನೇಮಕಾತಿಯನ್ನು ಮಾಡಲಿಕ್ಕೆ ಅವರಿಗೆ ಅಧಿಕಾರ ಇದೆ. ಒಂದು ವೇಳೆ ಆ ರೀತಿಯ ಅಧಿಕಾರ ಇಲ್ಲದೆ ನೇಮಕಾತಿಯನ್ನು ಮಾಡಿದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

IX. ದಾವಣಗೆರೆ ಶಂಕರ್ ಟೆಕ್ಸ್‌ಟೈಲ್ ಮಿಲ್ ಹಾಗೂ ಕೆ. ಆರ್. ಮಿಲ್‌ಗಳು ಕಳೆದ ಆರು ತಿಂಗಳಗಳಿಂದ ಮುಚ್ಚಿರುವುದು

ಶ್ರೀ ಪಂಪಾಪತಿ.—ದಾವಣಗೆರೆ ಶ್ರೀ ಶಂಕರ ಟೆಕ್ಸ್‌ಟೈಲ್ ಮಿಲ್ಸ್ ಮತ್ತು ಮೈಸೂರಿನ ಕೆ. ಆರ್. ಮಿಲ್ಲು ಸುಮಾರು ಒಂದು ವರ್ಷ ಆರು ತಿಂಗಳುಗಳಿಂದ ಮಾಲೀಕರುಗಳು ಮಿಲ್ಲುಗಳನ್ನು ಮುಚ್ಚಿದ್ದು ಈಗಾಗಲೇ ಈ ಸದನಲ್ಲಿ ನಾವು ಕಳೆದ ಎರಡು ಅಧಿವೇಶನದಲ್ಲಿ ಇದೇ ವಿಚಾರವನ್ನು ತಿಳಿಸಿದ್ದೇವೆ. ಸರ್ಕಾರ ಈ ಬಗ್ಗೆ ಮಿಲ್ ಮಾಲೀಕರನ್ನು ಕರೆಯಿಸಿ ಮಾತನಾಡುವುದಕ್ಕೆ ಮಾಡಿದ ಪ್ರಯತ್ನಗಳು ಸಫಲವಾಗಿಲ್ಲ. ಶ್ರೀ ಶಂಕರ್ ಮಿಲ್ಲಿನ ೯೦೦ ಜನ ಕೆ. ಆರ್. ಮಿಲ್ಲಿನ ೩೦೦ ಜನ ಕಾರ್ಮಿಕರು ಒಂದೂವರೆ ವರ್ಷದಿಂದ ಕೆಲಸ ಇಲ್ಲದೆ ಅಲೆದಾಡುತ್ತಾ ಜೀವನ ಸಾಗಿಸಲು ಕಷ್ಟ ಪಡುತ್ತಿದ್ದಾರೆ. ಕೆಲವರು ಜೀವನ ಸಾಗಿಸುವುದಕ್ಕೆ ಕಷ್ಟವಾಗಿ ವಿಷ ತೆಗೆದುಕೊಂಡು ಸತ್ತಿದ್ದಾರೆ. ಆದ್ದರಿಂದ ಸರ್ಕಾರ ತೀವ್ರ ಕ್ರಮ ತೆಗೆದುಕೊಳ್ಳುವಂತೆ ಸದನದ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್.—ಕಾರ್ಮಿಕರು ವಿಷ ತೆಗೆದುಕೊಂಡು ಸತ್ತು ಹೋಗಿರುವಂತಹ ನಿದರ್ಶನ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಪಂಪಾಪತಿ.—ಸರ್ಟಿಫಿಕೇಟ್‌ನ್ನು ತಂದು ಕೊಡುತ್ತೇನೆ.

ಶ್ರೀ ಡಿ. ಮಂಜುನಾಥ್.—ಶ್ರೀಮಾನ್ ಪಂಪಾಪತಿಯವರಿಗೆ ಚೆನ್ನಾಗಿ ಗೊತ್ತಿದೆ. ನಾನೂ ಕೂಡ ಈ ಬಗ್ಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇನೆ. ದಾವಣಗೆರೆ ಶಂಕರ್ ಟೆಕ್ಸ್‌ಟೈಲ್ ಮಿಲ್‌ನ ಬಗ್ಗೆ ನನಗಿಂತ ಅವರಿಗೆ ಚೆನ್ನಾಗಿ ಗೊತ್ತಿದೆ. ಅವರಿಗೆ ದೊಡ್ಡ ರಿಯಾಯಿತಿಯನ್ನೇ ಕೊಟ್ಟಿದ್ದೇವೆ. ಅವರು ಜಮೀನನ್ನು ಮಾರಿ ಮಿಲ್ಲನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದರು. ಈಗ ಆ ಜಮೀನನ್ನು ಮಾರಾಟ ಮಾಡಿದ್ದಾರೆ. ಮಿಲ್ಲನ್ನು ಪ್ರಾರಂಭ ಮಾಡುತ್ತೇವೆಂದೂ ಹೇಳಿದ್ದಾರೆ ಕೆ. ಆರ್. ಮಿಲ್‌ನ ಬಗ್ಗೆ ಹೇಳುವುದಾದರೆ, ಅವರು ಇಂಡಸ್ಟ್ರಿಯಲ್ ಬ್ಯಾಂಕ್‌ಗೆ ಹೋಲಕ್ಕಾಗಿ ಅರ್ಜಿಯನ್ನು ಹಾಕಿ ಕೊಂಡಿದ್ದಾರೆ. ಸರ್ಕಾರದಿಂದ ಅವರಿಗೆ ಏನೇನು ರಿಯಾಯಿತಿಯನ್ನು ಕೊಡಬೇಕೋ. ಅದನ್ನೂ ಕೂಡ ಕೊಡುವುದಕ್ಕೆ ಶಿಫಾರಸ್ಸು ಮಾಡಿದ್ದೇವೆ. ಅವರಿಗೆ ಒಂದೂವರೆ ಕೋಟಿ ರೂಪಾಯಿಗಳ ಸಾಲ ಮಂಜೂರಾಗಬೇಕು ಆ ಮಿಲ್ಲನ್ನೂ ಪ್ರಾರಂಭಿಸುವುದಕ್ಕೆ ಸರ್ಕಾರ ತನ್ನ ಕೈಲಾದ ಮಟ್ಟಿಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದೆ. ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಇದರಲ್ಲಿ ನಮ್ಮ ಅವರ ಮಧ್ಯ ವಿವಾದ ಏನೂ ಇಲ್ಲ.

ವಿವಾದಗಳೆಲ್ಲಾ ಬಗೆಹರಿದಿವೆ, ಆ ಪಂಚಾಯಿತಿಯಲ್ಲಿ ಮಾನ್ಯ ಕೃಷ್ಣನ್ ಅವರೂ ಇದ್ದರು. ಆದರೂ ಸರ್ಕಾರದಿಂದ ನಾವು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಪಂಪಾಪತಿ.—ಎರಡು ಸಲ ಪ್ರಯತ್ನ ಮಾಡಿದರೂ ಫಲಕಾರಿಯಾಗಿಲ್ಲ. ಸುಮಾರು ೪ ಸಾವಿರ ಜನ ಕಳೆದ ಒಂದೂವರೆ ವರ್ಷಗಳಿಂದ ನಿರುದ್ಯೋಗಿಗಳಾಗಿದ್ದಾರೆ.

ಅಧ್ಯಕ್ಷರು.—ನಿಯಮದ ಪ್ರಕಾರ ಉಪಪ್ರಶ್ನೆ ಕೇಳಲು ಅವಕಾಶವಿಲ್ಲ.